37

## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2258 |
| 2. | ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ |
| 3. | ಉತ್ತರಿಸಬೇಕಾದ ದಿನಾಂಕ | 26.03.2026 |
| 4. | ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ 2023-24, 2024-25 ಹಾಗೂ 2025-26ರಲ್ಲಿ ಸರ್ಕಾರವು ಒಟ್ಟು ಎಷ್ಟು ಸಾಲವನ್ನು ಪಡೆದಿದೆ; (ವರ್ಷವಾರು ವಿವರವನ್ನು ನೀಡುವುದು) ಸದರಿ ಸಾಲದಲ್ಲಿ ಒಳಗೊಂಡಿರುವ ಬಾಹ್ಯ ಸಾಲ, ಆಂತರಿಕ ಸಾಲ (Internal Debt) ಕೇಂದ್ರ ಸರ್ಕಾರದಿಂದ ಪಡೆದ ಸಾಲ, ಮಾರುಕಟ್ಟೆ ಸಾಲ (Market Borrowings), ವಿಶೇಷ ಉದ್ದೇಶ ಸಾಲಗಳು (Special Purpose Loans) ಹಾಗೂ ಇತರ ಬಾಧ್ಯತೆಗಳ ಸಾಲ ಎಷ್ಟು; (ಪ್ರತ್ಯೇಕ ವಿವರವನ್ನು ನೀಡುವುದು); | ಮಹಾಲೇಖಪಾಲರ ಲೆಕ್ಕದ ಮಾಹಿತಿಯನುಸಾರ 2023-24 ಮತ್ತು 2024-25ನೇ ಸಾಲಿನ ಅಂತ್ಯದವರೆಗಿನ ಹಾಗೂ 2025-26ನೇ ಸಾಲಿನಲ್ಲಿ ಲೆಕ್ಕದನ್ವಯ, 16ನೇ ಮಾರ್ಚ್,2026ರ ಅಂತ್ಯಕ್ಕೆ ಸಾರ್ವಜನಿಕ ಸಾಲದ ವಿವರಗಳು ಈ ಕೆಳಕಂಡಂತಿರುತ್ತವೆ. |

**(ರೂ. ಕೋಟಿಗಳಲ್ಲಿ)**

| ಕ್ರ. ಸಂ. | ವಿವರಗಳು | 2023-24ನೇ ಸಾಲಿನ ಲೆಕ್ಕ | 2024-25ನೇ ಸಾಲಿನ ಲೆಕ್ಕ | 2025-26ನೇ ಸಾಲಿನ ಲೆಕ್ಕ (16ನೇ ಮಾರ್ಚ್ 2026ರ ಅಂತ್ಯಕ್ಕೆ ಲೆಕ್ಕ) |
|---|---|---|---|---|
| 1 | ಮಾರುಕಟ್ಟೆ ಸಾಲಗಳು | 81000.00 | 92025.15 | 87000.00 |
| 2 | ನಬಾರ್ಡ್ ನಿಂದ ಸಾಲಗಳು | 3334.12 | 3125.91 | 1694.96 |
| 3 | ನ್ಯಾಷನಲ್ ಹೌಸಿಂಗ್ ಬ್ಯಾಂಕ್ (ಎನ್.ಎಚ್.ಬಿ) ಸಾಲಗಳು | 0.00 | 126.50 | 66.97 |
| 4 | ಬಾಹ್ಯ ಸಹಾಯ ಪಡೆದ ಯೋಜನೆಗಳಿಗೆ ಸಾಲ - ಬ್ಯಾಕ್-ಟು-ಬ್ಯಾಕ್ | 2066.56 | 2768.14 | 2130.34 |
| 5 | ಬಂಡವಾಳ ವೆಚ್ಚಕ್ಕಾಗಿ ರಾಜ್ಯಗಳಿಗೆ ಸಾಲವಾಗಿ ವಿಶೇಷ ನೆರವು | 3879.24 | 5296.12 | 4741.62 |
| | **ಒಟ್ಟು** | **90279.92** | **103341.81** | **95633.89** |

ಆ ಪ್ರತಿ ವರ್ಷ ರಾಜ್ಯದ ವಿತ್ತೀಯ ಕೊರತೆ ಎಷ್ಟು, ಅದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (GSDP) ಎಷ್ಟು ಶೇಕಡಾವಾರು ಆಗಿದೆ;

2023-24, 2024-25 ಹಾಗೂ 2025-26ರಲ್ಲಿನ ವಿತ್ತಿಯ ಕೊರತೆ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (GSDP) ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

(ರೂ. ಕೋಟಿಗಳಲ್ಲಿ )

| ವರ್ಷ | ವಿತ್ತೀಯ ಕೊರತೆ | ಶೇಕಡವಾರು ಜಿ.ಎಸ್.ಡಿ.ಪಿ |
|---|---|---|
| 2023-24 | 65522.37 | 2.55 |
| 2024-25 | 85029.56 | 2.97 |
| 2025-26 (ಆಯವ್ಯಯ ಅಂದಾಜು) | 90428.22 | 2.95 |
| 2025-26 (ಪರಿಷ್ಕೃತ ಅಂದಾಜು) | 91261.21 | 2.95 |

ಇ Fiscal Responsibility and Budget Management Act, 2003 ಹಾಗೂ ರಾಜ್ಯದ ಅನ್ವಯವಾಗುವ ವಿತ್ತೀಯ ಜವಾಬ್ದಾರಿ ಕಾಯ್ದೆಯಡಿ ನಿಗದಿಪಡಿಸಿರುವ ಆರ್ಥಿಕ ಶಿಸ್ತಿನಲ್ಲಿ ಸಾಲದ ಮಿತಿ (Fiscal Deficit and Debt-GSDP Ratio Ceiling) ಎಷ್ಟು; ರಾಜ್ಯ ಸರ್ಕಾರವು ಆ ಮಿತಿಯೊಳಗೆ ಕಾರ್ಯ ನಿರ್ವಹಿಸುತ್ತಿದೆಯೇ; ಇಲ್ಲದಿದ್ದಲ್ಲಿ, ಮಿತಿ ಮೀರಿರುವ ಪ್ರಮಾಣ ಎಷ್ಟು;

ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಮಾನದಂಡಗಳ ಅನ್ವಯ ವಿತ್ತೀಯ ಕೊರತೆ ಜಿ.ಎಸ್.ಡಿ.ಪಿ.ಯ ಶೇ. 3% ಮಿತಿ ಮತ್ತು ಒಟ್ಟಾರೆ ಹೊಣೆಗಾರಿಕೆಗಳನ್ನು 25% ಮಿತಿಯೊಳಗೆ ಪಾಲಿಸಲಾಗಿದೆ.

| ಆರ್ಥಿಕ ವರ್ಷ | ಶೇಕಡವಾರು ಜಿ.ಎಸ್.ಡಿ.ಪಿ | |
|---|---|---|
| | ವಿತ್ತೀಯ ಕೊರತೆ | ಒಟ್ಟು ಹೊಣೆಗಾರಿಕೆಗಳು |
| 2023-24 (ಲೆಕ್ಕ) | 2.55 | 23.49 |
| 2024-25 (ಲೆಕ್ಕ) | 2.97 | 23.91 |
| 2025-26 (ಪರಿಷ್ಕೃತ ಅಂದಾಜು) | 2.95 | 24.96 |
| 2026-27 (ಆಯವ್ಯಯ ಅಂದಾಜು) | 2.95 | 24.94 |

ಈ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಒಟ್ಟು ಸಾರ್ವಜನಿಕ ಸಾಲದ ಪ್ರಮಾಣ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (GSDPಗೆ) ಹೋಲಿಸಿದರೆ ಶೇಕಡಾ ಎಷ್ಟು ಆಗಿದೆ;

ಕಳೆದ ಮೂರು ವರ್ಷಗಳಲ್ಲಿ ಒಟ್ಟು ಆಂತರಿಕ ಉತ್ಪನ್ನಕ್ಕೆ (GSDPಗೆ) ಹೋಲಿಸಿದರೆ ರಾಜ್ಯದ ಒಟ್ಟು ಸಾರ್ವಜನಿಕ ಸಾಲದ ಪ್ರಮಾಣದ ಶೇಕಡವಾರು ವಿವರಗಳು ಈ ಕೆಳಕಂಡಂತಿರುತ್ತವೆ:

(ರೂ. ಕೋಟಿಗಳಲ್ಲಿ )

| ವರ್ಷ | ಸಾಲದ ವಿವರ | ಜಿ.ಎಸ್.ಡಿ.ಪಿ. ವಿವರ | ಜಿ.ಎಸ್.ಡಿ.ಪಿ.ಯ ಶೇಕಡವಾರು ವಿವರ |
|---|---|---|---|
| 2022-23 | 44548.73 | 2181217 | 2.04% |
| 2023-24 | 90279 92 | 2567340 | 3.52% |
| 2024-25 | 103341.81 | 2861929 | 3.61% |

ಉ ರಾಜ್ಯದ ಒಟ್ಟು ಸಾರ್ವಜನಿಕ ಸಾಲವನ್ನು ರಾಜ್ಯದ ಜನಸಂಖ್ಯೆಗೆ ಹಂಚಿದಲ್ಲಿ ಪ್ರತಿ ನಾಗರೀಕನ ಮೇಲೆ ಎಷ್ಟು ರೂಪಾಯಿ ಸಾಲ ಇದೆ?

2026 ಫೆಬ್ರುವರಿ ವರೆಗೆ ರಾಜ್ಯ ಸರ್ಕಾರದ ಬಾಕಿ ಉಳಿದಿರುವ ಒಟ್ಟು ಸಾರ್ವಜನಿಕ ಸಾಲವು 5,71,921 ಕೋಟಿ ರೂ ಗಳಷ್ಟಿದ್ದು, ರಾಜ್ಯದ ಪ್ರತಿಯೊಬ್ಬ ನಾಗರಿಕನ ಮೇಲಿನ ತಲಾ ಸಾಲದ ಹೊರೆ 83,146 ರೂಗಳಾಗಿರುತ್ತದೆ

**ಸಂಖ್ಯೆ: ಆಇ 46 ಬಿಜಿಎಲ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ